

# ಒಳಗೆ ನಗು, ಹೊರಗೆ ಬಿಗು!

ಎಲ್ಲರನ್ನೂ ನಗಿಸುವ ಹಾಸ್ಯಗಾರನ ಎದುರು ನಿಂತು ಗಂಭೀರವಾಗಿರುವುದು ಹೇಗೆ? ಅಂಥದೊಂದು ಪರಿಸ್ಥಿತಿ ಮಯೂರಿ ಅವರಿಗೆ ಎದುರಾಗಿದ್ದು 'ನಟರಾಜ ಸರ್ವೀಸ್' ಚಿತ್ರದಲ್ಲಿ. ಹೇಳಿಕೇಳಿ ಚಿತ್ರದ ನಾಯಕ ಶರಣ್ ಪ್ರೇಕ್ಷಕರಿಗೆ ಕಚಗುಳಿ ಇಡುವ ಪಾತ್ರಗಳಿಗೆ ಹೆಸರಾದವರು. ಅಶ್ವಿನಿ ಕೂಡ ಶರಣ್‌ರ ಸಿನಿಮಾಗಳನ್ನು ನೋಡಿ ಹೊಟ್ಟೆ ಹುಣ್ಣಾಗುವಂತೆ ನಕ್ಕವರು. ಇಂಥ ಶರಣ್‌ರ ಎದುರಿಗೆ ಗಂಭೀರವಾಗಿ ನಟಿಸುವುದು ಮಯೂರಿ ಅವರಿಗೆ ಸವಾಲಾಗಿ ಪರಿಣಮಿಸಿದೆ.

ಪವನ್ ಒಡೆಯರ್ ನಿರ್ದೇಶನದ 'ನಟರಾಜ ಸರ್ವೀಸ್' ಚಿತ್ರದಲ್ಲಿ ಮಯೂರಿ ಅವರದು ಗಂಭೀರ ಪಾತ್ರವಂತೆ. ಸಹನಾ ಎನ್ನುವ ಗಾಂಭೀರ್ಯವೇ ಮೈತಳೆದ ಹುಡುಗಿಯ ಪಾತ್ರ ಅವರದು. ನಗುಮುಖದ ನಟರಾಜನ ಎದುರಿಗೆ ನಟಿಸುವಾಗಲೆಲ್ಲ ಅವರಿಗೆ ಶರಣ್‌ರ ಹಳೆದ ಚಿತ್ರಗಳು ನೆನಪಾಗಿ ಗಂಭೀರವಾಗಿ ಇರುವುದೇ ಕಷ್ಟವಾಗುತ್ತಿತ್ತಂತೆ. ಶರಣ್ ಬಗ್ಗೆ ಕೋಪ ಪ್ರದರ್ಶಿಸುವುದು ಇನ್ನಷ್ಟು ಕಷ್ಟವಾಗಿದೆ. ನಗುವನ್ನು ಅದುಮಿಟ್ಟುಕೊಂಡು ಅವರು ನಾಯಕನ ಜೊತೆ ಜಗಳವಾಡಿದ್ದಾರೆ, ಡುಯೆಟ್ ಹಾಡಿದ್ದಾರೆ.

ತೆರೆ ಕಾಣುವ ಹಂತದಲ್ಲಿರುವ ಈ ಸಿನಿಮಾ ಪ್ರೇಕ್ಷಕರಿಗೆ ಭರ್ಜರಿ ಮನರಂಜನೆ ನೀಡಲಿದೆ ಎನ್ನುವುದು ಮಯೂರಿ, ಚಿತ್ರದ ಶೂಟಿಂಗ್ ಅನ್ನು ಸಾಕಷ್ಟು ಎಂಜಾಯ್ ಮಾಡಿದ್ದಾರೆ. ಹುಬ್ಬಳ್ಳಿಯಲ್ಲಿ ಶೂಟಿಂಗ್ ನಡೆಯುವಾಗ ಮಯೂರಿ ಅವರ ಮನೆಯಿಂದ ಚಿತ್ರತಂಡಕ್ಕೆ ಊಟ ಬಂದಿತ್ತಂತೆ. ಎಲ್ಲರೂ ಊಟ ಚಪ್ಪರಿಸಿಕೊಂಡು ತಿಂದದ್ದು ಕೂಡ ಮಯೂರಿ ಅವರ ಖುಷಿಯನ್ನು ಹೆಚ್ಚಿಸಿದೆ. ಅಂದಹಾಗೆ, ಚಿತ್ರದ ಸಂಗೀತ ನಿರ್ದೇಶಕ ಅನೂಪ್ ಸೀಳಿನ್ ಅವರ ಪತ್ನಿ ಮಯೂರಿ ಅಭಿಮಾನಿಯಂತೆ. ಇಂಥ ಸಣ್ಣಪುಟ್ಟ ಖುಷಿಗಳೆಲ್ಲ ಸೇರಿಕೊಂಡು 'ನಟರಾಜ ಸರ್ವೀಸ್' ಚಿತ್ರ ಮಯೂರಿ ಪಾಲಿಗೆ ಸ್ಮರಣೀಯವೆನ್ನಿಸಿದೆ.

ಕಿರುತೆರೆಯ 'ಅಶ್ವಿನಿ ನಕ್ಷತ್ರ' ಧಾರಾವಾಹಿಯಿಂದ ದೃಶ್ಯಮಾಧ್ಯಮಕ್ಕೆ ಬಂದ ಮಯೂರಿ 'ಕೃಷ್ಣಲೀಲಾ', 'ಇಷ್ಟಕಾಮ್ಯ' ಚಿತ್ರಗಳಲ್ಲಿ ನಟಿಸುವ ಮೂಲಕ ಚಿತ್ರರಸಿಕರ ಮೆಚ್ಚುಗೆಯನ್ನೂ ಗಳಿಸಿದ್ದಾರೆ. ಮೂರು ಚಿತ್ರಗಳಲ್ಲಿ ನಟನೆಗೆ ಪ್ರಾಧಾನ್ಯವಿರುವ ಪಾತ್ರಗಳು ದೊರೆತಿರುವ ಖುಷಿ ಅವರದು.

■ರಘು